

# ಯಕ್ಷಗಾನ ಕಲೆಯ ಪಡಸಾಲೆ





■ ಗಾಯತ್ರೀ ರಾಘವೇಂದ್ರ

ರಕ್ತಜಂಗ, ದುಷ್ಟಬುದ್ಧಿ, ದಕ್ಷ, ರಾವಣ, ಶತ್ರುಘ್ನ, ಜಾಂಬವ, ಅರ್ಜುನ, ದ್ರೋಣ, ಈಶ್ವರ, ವಾಲಿ, ಸುಗ್ರೀವ, ನರಕಾಸುರ, ಕಂಸ... ಹೀಗೆ ಯಕ್ಷಗಾನದಲ್ಲಿ ಹಲವು ಪಾತ್ರಗಳನ್ನು ನಿರ್ವಹಿಸಿರುವ ಬೆಳೆಯೂರಿನ ಕಲಾವಿದ ಸಂಜಯ್ ಕುಮಾರ್ ಅವರಿಗೆ ಪಾತ್ರಗಳಷ್ಟೇ ಅಲ್ಲ, ಯಕ್ಷಗಾನದ ಆಕರ್ಷಣೆಗಳಲ್ಲಿ ಒಂದಾದ ವೇಷಭೂಷಣ, ಪರಿಕರಗಳ ವಿನ್ಯಾಸವೂ ಆಸಕ್ತಿಯ ವಿಷಯ.

ಸಂಜಯ್ ಕುಮಾರ್ ಅವರದ್ದು ಮೂಲತಃ ಯಕ್ಷಗಾನ ಕಲಾ ಕುಟುಂಬ. ಇನ್ನೂರು ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಸಾಗರ ತಾಲ್ಲೂಕಿನ ಬೆಳೆಯೂರಿನ 'ಶ್ರೀಮಹಾಗಣಪತಿ ಯಕ್ಷಗಾನ ಮಂಡಳಿ'ಯ ಮೇಳದಲ್ಲಿ 25 ವರ್ಷಗಳ ಸುದೀರ್ಘ ಯಜಮಾನರಾಗಿದ್ದ ರಂಗನಾಥ ಹಾಗೂ ಜಯಲಕ್ಷ್ಮಿ ಅವರ ಮಗ ಸಂಜಯ್. ಯಕ್ಷಗಾನವೇ ಹಾಸುಹೊಕ್ಕಾಗಿದ್ದ ವಾತಾವರಣದಲ್ಲಿ ಬೆಳೆದ ಅವರಿಗೆ ಸಹಜವಾಗಿಯೇ ಈ ಕಲೆ ಒಲಿದುಬಂದಿದೆ. ಅದರೊಂದಿಗೆ ವೇಷಭೂಷಣಗಳ ವಿನ್ಯಾಸವೂ ಕರಗತವಾಗಿದೆ.

ಒಮ್ಮೆ ಯಕ್ಷಗಾನ ಅಭ್ಯಾಸದಲ್ಲಿ ನಿರತರಾಗಿದ್ದ ಸಂಜಯ್ ಅವರಿಗೆ ಯಕ್ಷಗಾನಕ್ಕೆ ತೊಡುವ ಕರ್ಣಪಾತ್ರ ಆಭರಣ ಸಮಸ್ಯೆಯಾಗಿ ಕಾಡಿತ್ತು. ಆಗೆಲ್ಲ ಈಗಿನ ಪಗಡೆಯ ಬದಲಿಗೆ ಅಟ್ಟೆ ಕಟ್ಟುವ ಕಾಲ. ಆ ಕರ್ಣಪಾತ್ರ ದವಡೆ ಎಲುಬಿಗೆ ಅಡೆದು ನೋವುಂಟು ಮಾಡುತ್ತಿತ್ತು. ಈ ಸಮಸ್ಯೆ ನಿವಾರಣೆಗೆ ಆರಂಭವಾದ ಅವರ ಹುಡುಕಾಟ ಹೊಸ ಕಾಯಕಕ್ಕೆ ಮುನ್ನುಡಿ ಬರೆದಿತ್ತು.

ಅಲ್ಲಿಂದ ಯಕ್ಷಗಾನಕ್ಕೆ ಬಳಸುವ ವೇಷಭೂಷಣಗಳು, ಆಲಂಕಾರಿಕ ಸಾಮಗ್ರಿಗಳ ವಿನ್ಯಾಸ ಕೆಲಸ ಪ್ರಾರಂಭಿಸಿದರು ಸಂಜಯ್. ಆನಂತರ, ಯಕ್ಷಗಾನ ವೇಷಭೂಷಣದಲ್ಲಿ ಪಾರಂಪರಿಕ ಔಚಿತ್ಯಕ್ಕೆ ವಿಘ್ನ ಬಾರದಂತೆ ಅನೇಕ ಹೊಸತನಗಳನ್ನು, ಸಂಪ್ರದಾಯಬದ್ಧ ಕುಸುರಿ ಕಲಾ ಕೆತ್ತನೆಗಳನ್ನು ಬಳಸಿ ಸುಧಾರಿತ ಮಾದರಿಗಳನ್ನು ತಯಾರು ಮಾಡುವಲ್ಲಿ ಸಿದ್ಧಹಸ್ತರಾದರು. ಯಕ್ಷಗಾನ ರಂಗದಲ್ಲಿ ಜಗಮಗಿಸುವ ಬೆಳಕಿನಲ್ಲಿ ಇವರು ತಯಾರಿಸಿದ ವೇಷಭೂಷಣಗಳು ಪಾತ್ರವನ್ನು ಇನ್ನಷ್ಟು ಗಟ್ಟಿ ಮಾಡಿದವು.

ಹಲವು ವರ್ಷಗಳಿಂದ ಈ ಕಾಯಕದಲ್ಲಿ ತೊಡಗಿಕೊಂಡಿರುವ ಸಂಜಯ್ ಅವರ ಮನೆಯೀಗ ಕಲಾಶಾಲೆಯೇ ಆಗಿದೆ. ಈ ಮನೆಯ ಪಡಸಾಲೆಯಲ್ಲೇ ಯಕ್ಷಗಾನ ಪರಿಕರಗಳ ರೂಪುರೇಷೆಗಳು ಸಿದ್ಧಗೊಳ್ಳುತ್ತಿವೆ. ಯಕ್ಷಗಾನದಲ್ಲಿ ಬಳಸಲಾಗುವ ಹಾರ, ಕಿರೀಟ, ಭುಜಕೀರ್ತಿ, ಕರ್ಣಪಾತ್ರ, ಮುಂದಲೆ, ಕೊರಳಸರ, ವೀರಗಾಸೆ, ಪುರುಷ ಸ್ತ್ರೀ ಪಾತ್ರಗಳ, ಬಣ್ಣದ ವೇಷಗಳ ಆಭರಣಗಳು ತಯಾರಾಗುತ್ತವೆ. ರಾಜ–ರಾಣಿ, ರಾಮ–ರಾವಣ, ಕಂಸ–ಕೃಷ್ಣ, ಈಶ್ವರ–ದಕ್ಷನ ಪಾತ್ರಧಾರಿಗಳ ಮೈಮೇಲೆ ಇವರಿಂದ ವಿನ್ಯಾಸಿತಗೊಂಡ ಪರಿಕರಗಳು ಕಣ್ಣು ಕೋರೈಸುತ್ತವೆ.

ಮನೆಯವರು ಸಂಜಯ್ ಅವರ ಕಾಯಕಕ್ಕೆ ಒತ್ತಾಸೆಯಾಗಿ ವಿನ್ಯಾಸದಲ್ಲಿ ಕೈಜೋಡಿಸುತ್ತಾರೆ. ರಾಜ್ಯವಷ್ಟೇ ಅಲ್ಲದೆ ಬೇರೆ ರಾಜ್ಯ, ವಿದೇಶಗಳಿಗೂ ಇವರ ಕೈಯಲ್ಲಿ ಅರಳಿದ ಯಕ್ಷಗಾನ ಪರಿಕರಗಳು ತೆರಳುತ್ತಿವೆ. ಬೆಳೆಯೂರಿನ ಮನೆಯ ಪಡಸಾಲೆಯಲ್ಲಿ ವಿನ್ಯಾಸಗೊಂಡ ಯಕ್ಷಗಾನ ಪರಿಕರಗಳು ಅಮೆರಿಕ, ಕೆನಡಾ, ದುಬೈ, ಜರ್ಮನಿ, ಸಿಂಗಪುರವನ್ನೂ ತಲುಪಿವೆ.

ಯಕ್ಷಗಾನ ಪಾತ್ರಗಳ ನಿರ್ವಹಣೆ ಜೊತೆಜೊತೆಗೆ ವೇಷಭೂಷಣಗಳ ವಿನ್ಯಾಸದಿಂದ ಮತ್ತಷ್ಟು ಕೈಗಳಿಗೆ ಕೆಲಸ ನೀಡಿರುವ ಸಂಜಯ್ ಕುಮಾರ್ ಅವರಿಗೆ, ದಿ. ರಾಮ ಹೆಗಡೆ ಕೊಂಡದಕುಳಿ ಪ್ರಶಸ್ತಿ, ಯಾಜಿ ಯಕ್ಷ ಮಿತ್ರಮಂಡಳಿ ಪ್ರಶಸ್ತಿ, ಗಾನಸೌರಭ ಯಕ್ಷಗಾನ ಶಾಲೆ ಸನ್ಮಾನ, ನಮ್ಮನೆ ಪ್ರಶಸ್ತಿಗಳು ಸಂದಿವೆ. ■